ಪದಾರ್ಥಗಳು, ಕುಡಿಯುವ ಪೇಯಗಳು ಬಣ್ಣವಿಲ್ಲದಿದ್ದರೆ ರುಚಿಸುವುದಿಲ್ಲ. ಅವುಗಳ ತಯಾರಿಕಾ ಹಂತದಲ್ಲಿ ಬಣ್ಣವು ಕಾಣದಿದ್ದಲ್ಲಿ ಕೃತಕ ಬಣ್ಣವಾದರೂ ಬಳಸುವಂತಾಗಿದೆ. ಸುಮ್ಮನೆ ಸ್ಮರಿಸಿಕೊಳ್ಳಿ, ಜಿಲೇಬಿ, ಜಾಂಗೀರು, ಮೈಸೂರ್ ಪಾಕ್, ಕಾಶಿ ಹಲ್ವಾ, ಕೇಸರೀ ಬಾತ್ ಸಾಕಲ್ಲ...!

ತಲೆಗೂದಲು, ಗಡ್ಡ, ಮೀಸೆ ಬಿಳಿಯಾಗುವುದಕ್ಕೆ ಬಲಿಯಾಗುತ್ತಿದ್ದವರೀಗ ಅಲ್ಲಿ ಸ್ವಲ್ಪ ಬಿಳಿ ಕಂಡೊಡನೆ ಸಲೀಸಾಗಿ ಬಣ್ಣಗಳ ಮೊರೆ ಹೋಗಿಬಿಡುತ್ತಾರೆ. ಕಪ್ಪು ಬಣ್ಣ ಕಪ್ಪು ಪಟ್ಟಿಗೆ ಸೇರಿದ್ದರೂ, ತಲೆಗೂದಲು ಕಪ್ಪೇ ಇರಬೇಕೆಂಬ ಹಟ. ಅದು ಚಿರಯೌವನಕ್ಕೆ ಪ್ರತೀಕವೋ! ಇಲ್ಲೂ ಕೆಲವರಿಗೆ ಕಪ್ಪು ಬಣ್ಣದ ಮೇಲೆ ಅದೇಕೆ ಅಪನಂಬಿಕೆ? (ಮಾನವ ಬುದ್ಧಿ). ಅದಕ್ಕೇ ಬೇರೆ ಬಣ್ಣಗಳ ಲೇಪನ. ಪ್ರಾಚೀನ ಕಾಲದಲ್ಲಿ ಬರುವ ಒಂದೆರಡು ಪ್ರಸಂಗಗಳೀಗ ನೆನಪಾಗುತ್ತವೆ. ಅಲ್ಲಿ ಕಥಾನಾಯಕನೊಬ್ಬ ಎಂದಿನಂತೆ ಕನ್ನಡಿ ಮುಂದೆ ನಿಂತಾಗ ಇದ್ದಕ್ಕಿದ್ದಹಾಗೆ ಒಂದೇ ಒಂದು ಬಿಳಿ ಕೂದಲು ಕಾಣುತ್ತದೆ. ಕೂಡಲೇ ಅವನಿಗೆ ಜೀವನದ ನಶ್ವರತೆಯ ಅರಿವಾಗಿ, ಆ ಕ್ಷಣವೇ ವೈರಾಗ್ಯ ಭಾವದಿಂದ ಕಾಡಿಗೆ ಹೋಗಿಬಿಡುತ್ತಾನೆ, ತಪಾಚರಣೆಗೆ. ಆದರೆ ಈಗ ನಾವು ಅಂಥದ್ದೊಂದೇ ಒಂದು ಬಿಳಿ ಕೂದಲು ಕಂಡ ತಕ್ಷಣವೇ ಅದಕ್ಕೆ ಕಪ್ಪು ಬಳಿಯುವುದರ ಮೂಲಕ, ವಯಸ್ಸನ್ನು, ಕಾಲವನ್ನು ಗೆಲ್ಲ ಹೊರಡುತ್ತೇವೆ! ನರೆಯನ್ನು ನಿರ್ನಾಮವಾಗಿಸಿ!

ಬಣ್ಣದ ಮಹಿಮೆ ಇಲ್ಲಿಗೇ ಮುಗಿಯದು. ಉಡುಗೆ–ತೊಡುಗೆಗಳ ವಿಷಯಕ್ಕೆ ಬಂದರೆ, ಎಲ್ಲರೂ ಒಂದೇ ಬಣ್ಣದ ಬಟ್ಟೆಗಳನ್ನು ತೊಡುವುದಿಲ್ಲವೆಂಬುದು ಎಲ್ಲರಿಗೂ ವೇದ್ಯ ವಿಷಯವೇ. ತಮಗೆ ಯಾವುದು ಪ್ರಿಯವೋ ಅಂಥ ಬಣ್ಣದ ಬಟ್ಟೆಗಳನ್ನೇ ಅವರು ತೊಡುತ್ತಾರೆ. ಇನ್ನೂ ಮುಂದುವರಿಸಿ ಹೇಳಬೇಕೆಂದರೆ ಇಲ್ಲೊಂದು ಸ್ವಾರಸ್ಯವಿದೆ. ಇಂಥ ಮಂದಿಯಲ್ಲಿ ಎರಡು ಬಗೆ. ತಮ್ಮ ಇಷ್ಟದ ಬಣ್ಣದ ಬಟ್ಟೆಗಳ ಧರಿಸುವವರು ಕೆಲವರಾದರೆ, ತಾವು ಯಾವ ಬಣ್ಣದ್ದು ತೊಟ್ಟರೆ ಅನ್ಯರಿಗೆ ಆಕರ್ಷಕವಾಗಿ ಕಾಣಬಹುದೆಂದು ಪ್ರಾಯೋಗಿಕವಾಗಿ ತಿಳಿದು ಧರಿಸುವವರು ಕೆಲವರು. ಇದು ಬರೀ ಅಭಿರುಚಿಗೆ ಸಂಬಂಧಿಸಿದ್ದು ಅಲ್ಲ. ವ್ಯಕ್ತಿತ್ವಕ್ಕೂ ಸೇರಿದೆ. ಮ್ಯಾಚಿಂಗ್ ಕಲರ್‌ನಲ್ಲಿ ಧರಿಸುವುದೇ ತಮ್ಮ ವ್ಯಕ್ತಿತ್ವವೆಂದು ಬಗೆಯುತ್ತಾರೆ. ಕಾಲ್ಬೆರಳಿನ ಉಗುರುಗಳಿಗೆ ಹಚ್ಚುವ ಬಣ್ಣದಿಂದ ಹಿಡಿದು ಹಣೆಬೊಟ್ಟಿನ ತನಕ ಮ್ಯಾಚಿಂಗ್ ಮ್ಯಾಚಿಂಗ್.

ದುಡ್ಡಿರುವವರಾದರೆ ಇನ್ನೊಂದು ಹೆಜ್ಜೆ ಮುಂದೆ, ನಿತ್ಯವೂ ಅವರು ಓಡಾಡುವ ವಾಹನಗಳೂ ಮ್ಯಾಚಿಂಗ್ ಲಿಸ್ಟಿಗೆ ಸೇರಿಕೊಳ್ಳುತ್ತವೆ. ಇಂಥದ್ದರ ನಡುವೆಯೂ ಕೆಲವು ದಿಲ್ದಾರ್ ಮನುಷ್ಯರು ಮಾತ್ರ ಯಾವ ಮ್ಯಾಚಿಂಗ್ ಬಗೆಗೂ ತಲೆಕೆಡಿಸಿಕೊಳ್ಳದೆ ಸಿಕ್ಕಿದ್ದು ತೊಟ್ಟು ಹಾಯಾಗಿ ಓಡಾಡುತ್ತಾರೆ.

ಧರಿಸುವ ಬಟ್ಟೆಗಳದಾಗಲಿ, ಮನೆಯ ಗೋಡೆಗಳದಿರಲಿ, ಬಣ್ಣಗಳ ಆಯ್ಕೆ ಹಾಗೂ ಇಷ್ಟಾನಿಷ್ಟ ಪೂರ್ತಿ ವೈಯಕ್ತಿಕ ಮತ್ತು ವ್ಯಕ್ತಿತ್ವ ಸಂಬಂಧಿ ಎಂದು ಕೆಲವು ಮನಶ್ಶಾಸ್ತ್ರಜ್ಞರೆನ್ನುತ್ತಾರೆ. ಅವರ ಪ್ರಕಾರ ವ್ಯಕ್ತಿಗಳು ಮೆಚ್ಚುವ ಒಂದೊಂದು ಬಣ್ಣವೂ ಒಂದೊಂದು ಗುಣ ಸ್ವಭಾವದ ಸಂಕೇತ. ಅಂದರದು ಆ ವ್ಯಕ್ತಿತ್ವದ ಒಂದೊಂದು ಗುಣ ವಿಶೇಷವನ್ನು ತಿಳಿಸುತ್ತದೆ.

ಬಣ್ಣಗಳು ಸಂಕೇತ ಕೂಡ. ರಸ್ತೆಯ ಸಿಗ್ನಲ್ ಲೈಟ್‌ಗಳಾಯಿತು. ರಾಷ್ಟ್ರಧ್ವಜವನ್ನೇ ನೋಡಿ, ಕೇಸರಿ, ಬಿಳಿ, ಹಸಿರು. ಇವುಗಳಲ್ಲಿ ಕೇಸರಿ ತ್ಯಾಗದ ಪ್ರತೀಕ. ಬಿಳಿ ಶಾಂತಿ ಸೂಚಕ. ಹಸಿರು ಸಮೃದ್ಧಿಯ ದ್ಯೋತಕ. ಹೀಗೆಯೇ ಯಾವ ಯಾವ ದೇಶಗಳು, ತಮ್ಮ ತಮ್ಮ ಧ್ವಜಗಳನ್ನು ಯಾವುದರ ಸಂಕೇತವಾಗಿಸಿದ್ದವೋ! ಮತ, ಧರ್ಮಗಳ ವಿಚಾರವೂ ಅಷ್ಟೆ. ಒಂದೊಂದು ಮತದಲ್ಲಿ ಒಂದೊಂದು ಬಣ್ಣಕ್ಕೆ ವಿಶೇಷ ಮನ್ನಣೆ. ಪಾದ್ರಿಗಳು ಬಿಳಿ ಅಥವಾ ನೇರಳೆ, ಸನ್ಯಾಸಿಗಳು ಕೇಸರಿ ಕಾವಿ, ಅಯ್ಯಪ್ಪನ – ಶನಿ ಮಹಾತ್ಮನ ಭಕ್ತರ ಬಟ್ಟೆಯು ಕಪ್ಪು, ಮುಸ್ಲಿಮರದು ಹಸಿರು, ಹೀಗೆ ಏನೆಲ್ಲ. ಇದೊಂದು ರೀತಿಯ ವಸ್ತ್ರಸಂಹಿತೆ. ಅಂದಹಾಗೆ ಮರೆತಿದ್ದೆ, ಕೆಂಪುಗುಲಾಬಿ ಪ್ರೇಮನಿವೇದನೆಯ ಸಂಕೇತ! ಇಲ್ಲಿ ಮಾತ್ರ ದೇಶ–ಮತ–ಅಭಿರುಚಿಗಳ ಹಂಗಿಲ್ಲ.

ಬಣ್ಣಗಳು ಜ್ಯೋತಿಷ್ಯವನ್ನೂ ಬಿಟ್ಟಿಲ್ಲ. ಪಂಚಭೂತಗಳು, ನವಗ್ರಹಗಳು, ರಾಶಿ–ನಕ್ಷತ್ರಗಳು ಇವುಗಳಿಗೇ ಸಂಬಂಧಿಸಿದ ಬಣ್ಣಗಳಿದ್ದು, ವ್ಯಕ್ತಿ ಧರಿಸತಕ್ಕ ಹರಳು–ವಸ್ತ್ರ ಇತ್ಯಾದಿಗಳ ಬಣ್ಣಗಳನ್ನು ಇವೇ ನಿರ್ಧರಿಸುತ್ತವೆ. ಪ್ರತಿನಿತ್ಯ ಟಿ.ವಿ.ಯಲ್ಲಿ ಕುಳಿತು ಭವಿಷ್ಯ ನುಡಿಯುವವರು, ಥರಾವರಿ ವೇಷಭೂಷಣಗಳೂ, ಮಣಿಸರಗಳೂ ಒತ್ತಟ್ಟಿಗಿರಲಿ, ಅದಕ್ಕಿಂತ ಮುಖ್ಯವಾದುದೆಂದರೆ ಜ್ಯೋತಿಷ್ಯ ಮುಖೇನ ಅವರು ನಿಧಾನವಾಗಿ ನಂಬಿಕಸ್ಥರ ಮೇಲೆ ಹೇರುವ ವರ್ಣಸಂಹಿತೆ! ಅವರ ಪ್ರತಿಪಾದನೆಯಂತೆ ಒಂದೊಂದು ಗ್ರಹಕ್ಕೆ ಒಂದೊಂದು ಬಣ್ಣವಿದೆ. ಉದಾ: ಸೂರ್ಯ–ಮಂಗಳರಿಗೆ ಕೆಂಪು (ಇಲ್ಲೂ ಸೂಕ್ಷ್ಮ ಒಳವ್ಯತ್ಯಾಸವಿದೆ). ಬುಧನಿಗೆ ಹಸಿರು, ಗುರುವಿಗೆ ಹಳದಿ, ಶನಿಗೆ ಕಪ್ಪು ಇತ್ಯಾದಿ. ಅಂದಮೇಲೆ, ಆಯಾ ಗ್ರಹಗಳಿಗೆ ಸಂಬಂಧಿಸಿದ ವಾರದ ದಿನಗಳಂದು ಅವರಿಗೆ ಪ್ರಿಯವಾದ ಬಣ್ಣದ ಬಟ್ಟೆಗಳನ್ನು ತೊಟ್ಟರೆ, ನೆಟ್ಟಗೆ ಪೂರ್ತಿ ತೊಡಲಾಗದಿದ್ದರೂ, ಕೇವಲ ಶರ್ಟು ಅಥವಾ ಪ್ಯಾಂಟು, ಅದೂ ಬೇಡ, ನಿರ್ದಿಷ್ಟ ಬಣ್ಣದ ಕರವಸ್ತ್ರ, ಕೊನೆಪಕ್ಷ ಆ ಬಣ್ಣದ ತುಂಡು ಬಟ್ಟೆ ಜೇಬಿನಲ್ಲಿರಲಿ. ಅಂದಹಾಗೆ ಎಚ್ಚರ, ಮಂಗಳ–ಶನಿ, ಪರಸ್ಪರ ವೈರಿಗಳು. ಹಾಗೆಯೇ ಗುರು–ಶುಕ್ರ, ಸೂರ್ಯ–ಶನಿ ಕೂಡ. ಒಂದು ಗ್ರಹಕ್ಕೆ ಸೇರಿದ ವಾರದ ದಿನದಂದು, ವೈರಿ ಗ್ರಹಕ್ಕೆ ಪ್ರಿಯವಾದ ಬಣ್ಣದ ಬಟ್ಟೆಗಳನ್ನು ತಪ್ಪಿಯೂ ಧರಿಸಕೂಡದು. ಧರಿಸಿದರೆ ಅಷ್ಟೆ. ನಂಬಿಕೆ ಉಳ್ಳವರಿರಲಿ, ಇಲ್ಲವೆಂದು ಹೇಳಿಕೊಳ್ಳುವವರೂ ಸಮಾಧಾನಕ್ಕಾಗಿ (ತಮ್ಮದಲ್ಲ, ಮನೆಯವರ) ಅಂಥದ್ದೊಂದು ತುಂಡು ವಸ್ತ್ರವನ್ನು ಯಾರಿಗೂ ಕಾಣದಂತೆ ಜೇಬಿನಲ್ಲಿರಿಸಿಕೊಳ್ಳುವುದನ್ನೂ ಕಂಡವರುಂಟು. ವಾಹನದ ವಿಚಾರವೂ ಅಷ್ಟೆ; ಹನ್ನೆರಡು ರಾಶಿ, ಇಪ್ಪತ್ತಾಲ್ಕು ನಕ್ಷತ್ರ ರೀತ್ಯಾ ಜಾತಕಕ್ಕೆ ಸರಿಹೋಗುವ ಬಣ್ಣದ ವಾಹನಗಳನ್ನು ಕೊಳ್ಳಬೇಕು. ಅಂದರೆ ಅಪಘಾತ ವಗ್ಗೆರೆ ಆಗಲಿಕ್ಕಿಲ್ಲ. ಇಲ್ಲಿ ಅಭಿರುಚಿ ಅಡ್ಡಗಾಲು ಹಾಕದಿರಲಿ. ಸುರಕ್ಷಿತವಾಗಿ ನಿತ್ಯವೂ (ಯಾವತ್ತೋ ಒಂದು ದಿನವಲ್ಲ) ಮನೆ ಸೇರಬೇಕಲ್ಲವೇ... ನಾವು ಬದುಕಿದ್ದರೆ ತಾನೇ ಅಭಿರುಚಿ ಮುಂತಾದವು.

ಇನ್ನು ಮನೆಯ ಗೋಡೆ–ಕಿಟಕಿಗಳಿಗೆ ಬಳಿಯತಕ್ಕ ಬಣ್ಣಗಳ ವಿಚಾರ. ಇಲ್ಲಿ ಪರಿಸರ ಪ್ರಜ್ಞೆ, ಧನಾತ್ಮಕ ಅಂಶಗಳು, ಮನಕ್ಕೆ ಮುದ ನೀಡುವುದು, ಎಲ್ಲ ಸೇರಿವೆ. ಮನೆಯ ಒಂದೊಂದು ಕೊಠಡಿ, ಅಡುಗೆ ಮನೆ, ಊಟದ ಮನೆ, ಹಜಾರಗಳಿಗೆ ಯಾವ ಬಣ್ಣ ಬಳಿಯಬೇಕೆಂಬ ವಿಷಯಕ್ಕೆ ಬೆಳಕೇ ಮೂಲಾಧಾರ. ಕೆಲವರು ಕೊಠಡಿಯ ಒಂದೊಂದು ಗೋಡೆಗೂ ಒಂದೊಂದು ಬಣ್ಣ ಬಳಿಯುವ ಪ್ರಯೋಗಶೀಲರು. ಇತ್ತಿತ್ತ ವಾಸ್ತು, ಜ್ಯೋತಿಷ್ಯ ಇದರ ಮೇಲೆ ಕೈಯಾಡಿಸುತ್ತ ಹಿಡಿತ ಸಾಧಿಸಹೊರಟಿದೆ. ಈ

